# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1302 |
| ವಿಧಾನ ಪರಿಷತ್ತು ಸದಸ್ಯರು | ಶ್ರೀ ಸಿ.ಎನ್ ಮಂಜೇಗೌಡ<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 19.03.2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರು ಜಿಲ್ಲೆಯಲ್ಲಿ ರೈತರ ಜಮೀನು ದುರಸ್ತಿಗೆ ಸಂಬಂಧಿಸಿದಂತೆ ನಿಗದಿ ಪಡಿಸಲಾದ ಗಡುವಿನೊಳಗೆ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ ಎಷ್ಟು; | ಪೋಡಿ ದುರಸ್ಥಿಗೆ ಸಂಬಂಧಿಸಿದಂತೆ ರೈತರು ಅರ್ಜಿ ಸಲ್ಲಿಸಲು ಸರ್ಕಾರವು ಯಾವುದೇ ಗಡುವನ್ನು ನಿಗದಿಪಡಿಸಿರುವುದಿಲ್ಲ. ರೈತರು ಅವರ ಅಗತ್ಯತೆಗನುಸಾರವಾಗಿ ಅರ್ಜಿ ಸಲ್ಲಿಸಿದ ತಕ್ಷಣ ಪೋಡಿ ಕೆಲಸ ನಿರ್ವಹಿಸಲು ಭೂಮಾಪನ ಇಲಾಖೆಯು ಕಾರ್ಯಪ್ರವೃತ್ತವಾಗುತ್ತದೆ.<br>ಮೈಸೂರು ಜಿಲ್ಲೆಯಲ್ಲಿ ತತ್ಕಾಲ್ ಪೋಡಿ (ಮ್ಯುಟೇಷನ್ ಪೋಡಿ), ದರಖಾಸ್ತು ಪೋಡಿ, ಅಲಿನೇಷನ್ ಪೋಡಿ, ಭೂಸುಧಾರಣಾ ಪೋಡಿ ಸಂಬಂಧ ರೈತರು ಕಳೆದ ಒಂದು ವರ್ಷದಲ್ಲಿ 19,667 ಅರ್ಜಿಗಳನ್ನು ಸಲ್ಲಿಸಿರುತ್ತಾರೆ.<br>ದರಖಾಸ್ತು ಪೋಡಿಗೆ ಸಂಬಂಧಿಸಿದಂತೆ, ಮೈಸೂರು ಜಿಲ್ಲೆಯಲ್ಲಿ ದಿನಾಂಕ: 01-12-2024 ರಿಂದ 28-02-2025 ರವರೆಗೆ ಆಯಾ ತಾಲ್ಲೂಕಿನ ತಹಶೀಲ್ದಾರ್ ರವರಿಂದ ಒಟ್ಟು 213 ಸ.ನಂ ಗಳ (521 ಬ್ಲಾಕುಗಳು) ಬಾಬ್ತು ಪ್ರಸ್ತಾವನೆಯನ್ನು ಅಳತೆಗಾಗಿ ಸ್ವೀಕೃತವಾಗಿರುತ್ತವೆ. |
| ಆ) | ಗಡುವಿನ ಅವಧಿಯೊಳಗೆ ಎಷ್ಟು ಜಮೀನುಗಳನ್ನು ದುರಸ್ತಿ ಮಾಡಲಾಗಿದೆ; | ಮೈಸೂರು ಜಿಲ್ಲೆಯಲ್ಲಿ ತತ್ಕಾಲ್ ಪೋಡಿ (ಮ್ಯುಟೇಷನ್ ಪೋಡಿ), ದರಖಾಸ್ತು ಪೋಡಿ, ಅಲಿನೇಷನ್ ಪೋಡಿ, ಭೂಸುಧಾರಣಾ ಪೋಡಿ ಸಂಬಂಧ 9,373 ಪ್ರಕರಣಗಳ ದುರಸ್ತಿ ಕೆಲಸ ನಿರ್ವಹಿಸಲಾಗಿದೆ.<br>ದರಖಾಸ್ತು ಪೋಡಿ ಬಗ್ಗೆ ಸರಳೀಕರಣಗೊಳಿಸಿದ ನಂತರ ಮೈಸೂರು ಜಿಲ್ಲೆಯಲ್ಲಿ 25 ಸ.ನಂ. (55 ಬ್ಲಾಕುಗಳು) ಗಳ ಬಾಬ್ತು ದುರಸ್ತಿ ಕೆಲಸ ನಿರ್ವಹಿಸಲಾಗಿರುತ್ತದೆ. |
| ಇ) | ಗಡುವಿನೊಳಗೆ ದುರಸ್ತಿ ಮಾಡದೆ ಬಾಕಿ ಉಳಿದ ಅರ್ಜಿಗಳ ಸಂಖ್ಯೆ ಎಷ್ಟು; ಈ ಸಂಬಂಧ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು? | ದರಖಾಸ್ತು ಪೋಡಿ ಸರಳೀಕರಣಗೊಳಿಸಿದ ನಂತರದ ಅವಧಿಯಲ್ಲಿ ಮೈಸೂರು ಜಿಲ್ಲೆಯಲ್ಲಿ ದುರಸ್ಥಿಗೆ ಸ್ವೀಕೃತವಾಗಿರುವ 74 ಸರ್ವೆ ನಂಬರುಗಳ (217 ಬ್ಲಾಕುಗಳು) ಪ್ರಕರಣಗಳು ಬಾಕಿ ಇದ್ದು, ಇವುಗಳನ್ನು ದುರಸ್ಥಿಗೊಳಿಸುವ ಪ್ರಕ್ರಿಯೆಯು ಚಾಲ್ತಿಯಲ್ಲಿದ್ದು, ಶೀಘ್ರವೇ ಕ್ರಮ ಜರುಗಿಸಲಾಗುತ್ತದೆ.<br>ತತ್ಕಾಲ್ ಪೋಡಿ (ಮ್ಯುಟೇಷನ್ ಪೋಡಿ), ಅಲಿನೇಷನ್ ಪೋಡಿ ಪ್ರಕ್ರಿಯೆಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ನಿರ್ವಹಿಸಲಾಗುತ್ತಿದ್ದು, |

| | | |
|---|---|---|
| | | ಅರ್ಜಿ ಸ್ವೀಕೃತಗೊಂಡ 30 ರಿಂದ 60 ದಿನಗಳ ಒಳಗಾಗಿ ಅಗತ್ಯ ಪ್ರಕ್ರಿಯೆಗಳನ್ನು ಜರುಗಿಸಿ, ದುರಸ್ತಿ ಕೆಲಸ ಪೂರ್ಣಗೊಳಿಸಲಾಗುತ್ತಿದೆ.<br>ದುರಸ್ತಿ ಕೆಲಸ ನಿರ್ವಹಿಸುವಲ್ಲಿ ಯಾವುದೇ ಅಧಿಕಾರಿ ಹಾಗೂ ಸಿಬ್ಬಂದಿಯವರು ಅನಗತ್ಯವಾಗಿ ವಿಳಂಬ ಅಥವಾ ಬಾಕಿ ಉಳಿಸಿಕೊಂಡಿದ್ದಲ್ಲಿ, ದೂರು ಸ್ವೀಕೃತವಾದ್ದಲ್ಲಿ, ಈ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಸದರಿಯವರುಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುತ್ತದೆ. |

**ಸಂಖ್ಯೆ: ಕಂಇ 55 ಎಸ್‌ಎಸ್‌ಸಿ 2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು